ಮಾಡಿದ ಹಿರಿಮೆ ತನ್ನದೆಂದು ಬೊಗಳೆ ಬಿಡುತ್ತಿದ್ದ. ಏನೇ ಇರಲಿ, ನಮ್ಮೂರ ಯುವಕರಿಗೆ ಜುಟ್ಟಿನ ಬದಲಾಗಿ ಕ್ರಾಪ್ ಫ್ಯಾಶನ್‌ನ ಹುಚ್ಚು ಹಿಡಿಸಿದ ಗುಂಡ, ಸಿನಿಮಾ ನಟರ ಸ್ಟೈಲನ್ನೂ ಕಲಿಸಿಕೊಟ್ಟ ಕ್ರಾಂತಿ ಹರಿಕಾರ!

ತಮ್ಮು, ಗುಂಡನ ನಂತರ ಅವರ ವಂಶಸ್ಥರು ಯಾರೂ ನಮ್ಮೂರಿನಲ್ಲಿ ಕುಲಕಸುಬನ್ನು ಮುಂದುವರೆಸಲಿಲ್ಲ. ಗುಂಡನ ಮಕ್ಕಳಿಬ್ಬರೂ ಬೆಂಗಳೂರಿನಲ್ಲಿ ಬಾರ್, ನೈಟ್ ಕ್ಲಬ್‌ಗಳಲ್ಲಿ ಕೆಲಸಕ್ಕೆ ಸೇರಿ, ಕ್ರಮೇಣ ಬಾರ್, ನೈಟ್ ಕ್ಲಬ್‌ಗಳ ಓನರ್ ಆಗಿ ಮನೆ, ಸೈಟ್ ಮಾಡಿಕೊಂಡು ಶ್ರೀಮಂತರಾಗಿ ರಿಯಲ್ ಎಸ್ಟೇಟ್ ಬಿಸನೆಸ್ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಊರಿನಲ್ಲೀಗ ಬೇರೆ ಊರಿಂದ ಬಂದ ವೆಂಕಟೇಶ, ''ಫ್ಯಾಶನ್ ಹೇರ್‌ಕಟ್ಟಿಂಗ್ ಸಲೂನ್'' ತೆರೆದು, ಮನೆ ಮನೆಗೂ ಹೋಗುವ ಪ್ರವೃತ್ತಿಗೆ ವಿದಾಯ ಹೇಳಿದ್ದಾನೆ. ಹಾಗಾಗಿ ನಮ್ಮೂರಿನವರಿಗೆ ಕಟ್ಟಿಂಗ್ ಮಾಡಿಸಿಕೊಳ್ಳಲು ಶಾಪಿಗೆ ಹೋಗಲೇ ಬೇಕಾದದ್ದು ಅನಿವಾರ್ಯ. ಅಲ್ಲದೇ ಕಟ್ಟಿಂಗ್ ಮಾಡಿಸಲು ಅವನ ಬಳಿ ಅಪಾಯಿಂಟ್‌ಮೆಂಟ್ ಫಿಕ್ಸ್ ಮಾಡಿಕೊಳ್ಳಬೇಕು. ಆದ್ಯತೆ ಮೇಲೆ ಅವನು ಕಟಿಂಗ್ ಮಾಡುವುದು. ಇದೆಲ್ಲಕ್ಕಿಂತ ಹೆಚ್ಚಾಗಿ ಕಟಿಂಗ್, ಶೇವಿಂಗ್ ಮಾಡಿಸಿಕೊಳ್ಳುವವರು ಮುಂಗಡವಾಗಿ ಹಣ ಪಾವತಿಸಲೇಬೇಕು. ಇದರಿಂದ ಕಟಿಂಗ್ ಮಾಡಿಸಿ ನಾಳೆ ಕೊಡುತ್ತೇವೆಂದು ಕಡ ಹೇಳಿ ಮರೆಯಾಗುತ್ತಿದ್ದ ಮಂದಿಗೆ ಎದುರಾಗಿರುವುದು ಆಡಲಾಗದ, ಅನುಭವಿಸಲಾಗದ ಎಡವಟ್ಟಿನ ಸನ್ನಿವೇಶ!

ಹೆಚ್ಚಿನ ವಿದ್ಯಾಭ್ಯಾಸ ಹಾಗೂ ಉದರ ನಿಮಿತ್ತಕ್ಕಾಗಿ ಊರು ತೊರೆದು ಉಡುಪಿ, ಮೈಸೂರು, ಬೆಂಗಳೂರಿನತ್ತ ವಲಸೆ ಹೋದ ನಾನು, ಅಲ್ಲಲ್ಲಿನ ಕಟ್ಟಿಂಗ್ ಶಾಪ್‌ಗಳಲ್ಲಿ ''ಕರ್ನಾಟಕ ಸವಿತಾ ಸಮಾಜ'' ತಲೆಬರಹದ ಪ್ರಿಟೆಂಡ್ ರಟ್ಟಿನ ಬೋರ್ಡ್ ಸಾಮಾನ್ಯವಾಗಿ ನೇತಾಡುತ್ತಿದ್ದದ್ದನ್ನು ಕಂಡಿದ್ದೇನೆ. ಸರ್ಕಾರಿ ಸೌಲಭ್ಯ ಪಡೆಯಲು, ಸಾರ್ವಜನಿಕರ ಗಮನ ಸೆಳೆಯಲು ಸವಿತಾ ಸಮಾಜದವರು ರಾಜ್ಯ ಮಟ್ಟದಲ್ಲಿ ಸಂಘಟಿತರಾಗಿ ನಿರ್ಮಿಸಿಕೊಂಡ ಒಕ್ಕೂಟವದು. ಅದರಲ್ಲಿ ಕಟ್ಟಿಂಗ್, ಶೇವಿಂಗ್ ಬಗ್ಗೆ ನಿಖರ ದರ ಪಟ್ಟಿ ನಮೂದಿತವಾಗಿರುತ್ತಿತ್ತು. ಕಾಲಕಾಲಕ್ಕೆ ಪಟ್ಟಿ ಪರಿಷ್ಕರಣೆಗೊಂಡು ಪ್ರದರ್ಶಿತವಾಗುತ್ತಿತ್ತು. ಆದರೆ, ಎಲ್ಲಾ ಪ್ರಿಂಟೆಡ್ ಬೋರ್ಡ್‌ಗಳಲ್ಲೂ ಬದಲಾಗದೇ, ಕಡ್ಡಾಯವಾಗಿ ಇರುತ್ತಿದ್ದ ಒಕ್ಕಣೆಯೆಂದರೆ ಕೊನೆಯಲ್ಲಿರುತ್ತಿದ್ದ ವಿಶೇಷ ಸೂಚನೆ: ''ದಯವಿಟ್ಟು ಗಮನಿಸಿ : ಇಲ್ಲಿ ಬಗಲ ಕೂದಲನ್ನು ತೆಗೆಯಲಾಗುವುದಿಲ್ಲ.''

ಈಗೀಗ ಯಾವ ಕಟಿಂಗ್ ಶಾಪ್‌ನಲ್ಲೂ ಸವಿತಾ ಸಮಾಜದ ಬೋರ್ಡ್ ಪ್ರದರ್ಶಿತವಾಗುತ್ತಿಲ್ಲ. ಅಷ್ಟೇಅಲ್ಲ, ಶಾಪ್‌ಗಳೂ ತಮ್ಮದೇ ಆದ ದರಪಟ್ಟಿ ನಿಗದಿ ಪಡಿಸಿಕೊಳ್ಳುತ್ತಿವೆ.

ಸಾಲದೆಂಬಂತೆ ಮಹಿಳೆಯರೂ ''ಲೇಡಿಸ್ ಬ್ಯೂಟಿಪಾರ್ಲರ್'' ತೆರೆದು ಹಲವು ಬಗೆ ಕೇಶಶೃಂಗಾರ ವಿನ್ಯಾಸದಲ್ಲಿ ತೊಡಗಿದ್ದಾರೆ. ಕೆಲವೆಡೆ ಮಹಿಳೆಯರೇ ಗಂಡಸರ ಹಾಗೂ ಹೆಂಗಸರ ಕೇಶಶೃಂಗಾರ ಸಲೂನ್ ನಡೆಸುತ್ತಿದ್ದಾರೆ.

ಆರ್ಯನ ಕಟಿಂಗ್ ಮುಗಿದ ಮೇಲೆ ನಾನೂ ಕಟಿಂಗ್ ಮಾಡಿಸಿಕೊಂಡು, ''ಮೂವರ ಕಟಿಂಗ್, ಎಷ್ಟು?'' ಕೇಳಿದೆ.

''ಪೋರ್‌ಫಿಫ್ಟಿ...'' ಎಂದ ಮೇಲ್ವಿಚಾರಕ.

''ಮಕ್ಕಳಿಗೆ, ದೊಡ್ಡವರಿಗೆ ಒಂದೇ ರೇಟಾ?''

''ಹೌದು, ಎಲ್ಲರಿಗೂ ಒಂದೇ. ಫಿಕ್ಸೆಡ್ ರೇಟ್.''

ಬಾಲ್ಯದಲ್ಲಿ ಒಂದಾಣೆ ತೆತ್ತು ಕ್ಷೌರ ಮಾಡಿಸಿಕೊಂಡಿದ್ದ ನನಗೆ, ಆರುಷ್, ಆರ್ಯರ ರೇಟು ಬಹಳ ದುಬಾರಿ ಎನಿಸಿ, ''ಮಕ್ಕಳಿಗೆ ಸ್ವಲ್ಪ ಕಮ್ಮಿ ಮಾಡಿಕೊಳ್ಳಪ್ಪಾ...'' ಎಂದೆ.

''ಬಿಲ್‌ಕುಲ್ ನಹೀ ಸಾಬ್... ನಮ್ಗೆ ಗಿಟ್ಟೋದಿಲ್ಲ...'' ಎಂದು ಷಾಪ್ ಡೆಕೋರೇಷನ್,